C.R.P.67

| Form No.4 (Criminal) Deposition Sheets (R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 362/2018

**ಚಾ.ಸಾ.–20 ಪ್ರಾ.ಸಾ.–07**

| | |
|---|---|
| **ಸಾಕ್ಷಿದಾರರ ಹೆಸರು** | **ಕುಮಾರ** |
| **ತಂದೆಯ ಹೆಸರು** | **ಲೇಟ್ ಪುಟ್ಟೇಗೌಡ** |
| **ವಯಸ್ಸು** | **50 ವರ್ಷಗಳು** |
| **ಉದ್ಯೋಗ** | **ಪೋಲೀಸ್ ಇನ್ಸ್‌ಪೆಕ್ಟರ್, ಜಯಲಕ್ಷ್ಮಿಪುರಂ ಪೋಲೀಸ್ ಠಾಣೆ, ಮೈಸೂರು ನಗರ** |
| **ವಾಸ** | **ಮೈಸೂರು ನಗರ** |

**Through Video Conference**

**ದಿನಾಂಕಃ 11.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು ದಿಃ23.01.2017 ರಿಂದ ದಿಃ17.09.2018 ರವರಗೆ ಮದ್ದೂರು ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ31.08.2017 ರಂದು ಸಂಜೆ 7.30 ಗಂಟೆಗೆ ಠಾಣಾ ಕರ್ತವ್ಯದಲ್ಲಿ ಇದ್ದಾಗ ಈ ಪ್ರಕರಣದ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ: 369/2017 ರಲ್ಲಿ ಕಲಂ 143, 448, 323, 504 ಸಹ ಕಲಂ 149 ಐಪಿಸಿ ಹಾಗೂ Sec.3(1)(g), 3(1)(r), 3(1)(S), of SC/ST PoA Act ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–22** ಎಂದು

ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–22(ಎ)** ಎಂದು ಗುರುತಿಸಲಾಗಿದೆ. ಪಿರ್ಯಾದಿ ಕೊಟ್ಟ ಲಿಖಿತ ದೂರಿನ ಪ್ರತಿಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.1(ಬಿ)** ಎಂದು ಗುರುತಿಸಲಾಯಿತು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ– 21 ರಿಗೆ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ</u>**

3. ಈ ಪ್ರಕರಣವನ್ನು ದಾಖಲು ಮಾಡುವ ಪೂರ್ವದಲ್ಲಿ ನಾನು ವಳಗೆರೆಹಳ್ಳಿಗೆ ಭೇಟಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ31.08.2017 ರಲ್ಲಿ ವಳಗೆರೆಹಳ್ಳಿ ಗ್ರಾಮದಲ್ಲಿ ಒಂದು ಶಾಂತಿ ಸಭೆ ಆಗಿತ್ತು ಎಂದರೆ ಸರಿ. ಸದರಿ ಶಾಂತಿ ಸಭೆ ನಿಪಿ–1 ದೂರು ದಾಖಲಿಸುವ ಪೂರ್ವದಲ್ಲಿ ಅಗಿರುತ್ತದೆ. ಸದರಿ ಶಾಂತಿ ಸಭೆಯಲ್ಲಿ ಗ್ರಾಮದಲ್ಲಿ ಯಾವುದೇ ರೀತಿಯ ಅಸ್ಪುಶ್ರತೆ ಆಚರಣೆ ಆಗುತ್ತಿಲ್ಲ ಹಾಗೂ ಭಜಂತ್ರಿಗಳು ದಲಿತರಿಗೆ ಕ್ಷೌರ ಮಾಡುವುದನ್ನು ನಿರಾಕರಿಸಿರುವುದಿಲ್ಲ ಎಂಬ ವಿಚಾರ ಮನವರಿಕೆಯಾಗಿರುತ್ತದೆ. ಸದರಿ ಶಾಂತಿ ಸಭೆಗೆ ನಾನು ಹಾಜರಾಗಿದ್ದು ಸದರಿ ಶಾಂತಿ ಸಭೆಯ ನಿಪಿ–17 ನಡೆವಳಿಗಳಲ್ಲಿ ನನ್ನ ಸಹಿ ಕೂಡ ಇದೆ ಎಂದರೆ ಸರಿ. ಸದರಿ ಶಾಂತಿ ಸಭೆಯಲ್ಲಿ ಆಸ್ತಿ ಸಂಖ್ಯೆಃ1025 ಗ್ರಾಮ ಪಂಚಾಯಿತಿಯ ಮಾಲೀಕತ್ವದಲ್ಲಿ ಇದೆ ಎಂದು ಕಂಡುಬಂದಿರುವ ವಿಷಯ ನನಗೆ ಗೊತ್ತಾಗಿರುತ್ತದೆ. ಸದರಿ ಶಾಂತಿ ಸಭೆಗೆ ಚಾಸಾ- 1 ರವರು ಸಹಾ ಹಾಜರಿದ್ದರು. ಸದರಿ ಶಾಂತಿ ಸಭೆಯಲ್ಲಿ ಆಸ್ತಿ ಸಂಖ್ಯೆಃ1025 ಪಿರ್ಯಾದಿಗೆ ಸೇರಬೇಕೆಂದು ಅವರು ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಗ್ರಾಮದಲ್ಲಿ ಇದ್ದಾಗ ಪಿರ್ಯಾದುದಾರರು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಯಾವುದೇ ದೂರನ್ನು ನನಗೆ ನೀಡಿರುವುದಿಲ್ಲ. ದೂರಿನಲ್ಲಿ ಚಾಸಾ- 1 ರವರು ಹೇಳಿರುವಂತಹ ಘಟನೆಯ ಬಗ್ಗೆ ನಾನು ಆ ದಿನ ಗ್ರಾಮದಲ್ಲಿ ಇದ್ದಾಗ ನನಗೆ ಮಾಹಿತಿ ಬರಲಿಲ್ಲ. ಚಾಸಾ- 1 ರವರು ಠಾಣೆಗೆ ಹಾಜರಾಗಿ ನಿಪಿ–1 ದೂರು ನೀಡುವ ವರೆಗು ಈ ಪ್ರಕರಣದ ಬಗ್ಗೆ ಠಾಣೆಗೆ ಯಾವುದೇ ಮಾಹಿತಿ ಬಂದಿರಲ್ಲಿಲ್ಲ ಎಂದರೆ ಸರಿ. ಪಿರ್ಯಾದಿದಾರರು ನೀಡಿದ ದೂರು ಸುಳ್ಳು ಎಂದು

ಮನವರಿಕೆಯಾಗಿದ್ದರೂ ಸಹಾ ಅವರ ಪ್ರಭಾವಕ್ಕೆ ಮತ್ತು ಒತ್ತಡಕ್ಕೆ ಮಣಿದು ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಿಪಿ-1 ದೂರಿನಲ್ಲಿ "ನಮ್ಮ ಊರಿನಲ್ಲಿ ಮೊದಲಿನಿಂದಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಜನರಿಗೆ ಊರಿನ ಕೌರಿಕರು ಕ್ಷೌರ ಮಾಡುತ್ತಿರಲಿಲ್ಲ, ಪೋಲೀಸ್ ಠಾಣೆಯಲ್ಲಿ ಪ್ರತಿ ತಿಂಗಳು ದಲಿತರಿಗೊಂದುದಿನ ಎಂದು ಸಭೆ ನಡೆಯುವಾಗ ಆ ಸಬೆಯಲ್ಲಿ ದಲಿತ ಸಂಘದ ಮುಖಂಡರು ಭಾಗಿಯಾಗುತ್ತಾರೆ, ಆ ಸಮಯ 1998 - 2000 ದ ಇಸವಿಯಿಂದಲೂ ಸದರಿ ಸಭೆಗಳಲ್ಲಿ ದಲಿತ ವರ್ಗದವರಿಗೆ ಕ್ಷೌರ ಮಾಡುತ್ತಿಲ್ಲ ನಮಗೂ ಊರಿನಲ್ಲಿ ಕ್ಷೌರ ಮಾಡಿಸಲು ಅವಕಾಶ ಮಾಡಿಕೊಡಿ ಎಂದು ಕೇಳುತ್ತಾ ಬಂದಿದ್ದೆವು, 2014 ರಲ್ಲಿ ಪೋಲೀಸರು ಗ್ರಾಮ ಪಂಚಾಯಿತಿಗೆ ಪತ್ರ ಬರೆದು ದಲಿತರಿಗೆ ಕ್ಷೌರ ಮಾಡಲು ಅನುವು ಮಾಡಿಕೊಡಿ ಎಂದು ಹೇಳಿದ್ದು, ಅದಾದ ನಂತರ ಗ್ರಾಮದಲ್ಲಿ ಗ್ರಾಮ ಸಭಗಳಾದರೂ ಸಹಾ ಈ ವಿಚರ ಬಗೆಹರಿಯಲಿಲ್ಲ, **2017** ಏಪ್ರಿಲ್ ತಿಂಗಳಿನಲ್ಲಿ ಡಿ.ವೈ.ಎಸ್.ಪಿ ರವರ ನೇತೃತ್ವದಲ್ಲಿ ಊರಿನಲ್ಲಿ ಒಂದು ಜಾಗೃತಿ ಸಭೆಯಾಗಿದ್ದು ಆ ಸಭೆಯಲ್ಲಿ ಗ್ರಾಮದ ಸಾರ್ವಜನಿಕರೆಲ್ಲರಿಗೂ ಕ್ಷೌರ ಮಾಡಬೇಕೆಂಬ ನಿರ್ದಾರ ಆಗಿದ್ದರೂ ಸಹ ದಲಿತ ಜನಾಂಗದವರಿಗೆ ಕ್ಷೌರ ಮಾಡುತ್ತಿರಲಿಲ್ಲ ದಿಃ**21.7.2017** ರಂದು ಪಿರ್ಯಾದಿ ಎ ಎಸ್ ಪಿ ರವರಿಗೆ ಕ್ಷೌರ ಮಾಡಲು ಅನುವು ಮಾಡಿಕೊಡಬೇಕೆಂದು ಲಿಖಿತ ಮನವಿ ಸಲ್ಲಿಸಿದ್ದು ಹಾಗೂ ದಿಃ**06.07.2017** ರಂದು ಅವರ ಊರಿನ ಪಂಚಾಯಿತಿಗೆ ದಲಿತ ಜನಾಂಗದವರನ್ನು ಸಹಾ ಕ್ಷೌರ ಮಾಡಲು ಅನುವು ಮಾಡಿಕೊಡಬೇಕೆಂದು ಕೋರಿಕೆ ಸಲ್ಲಿಸಿದ್ದು ಈ ಬಗ್ಗೆ ಪೋಲೀಸರು ನಿರ್ದೇಶನ ನೀಡಿದ್ದರೂ ಸಹಾ ಕಟಂಗ್ ಮಾಡುವವರು ಒಪ್ಪದಿದ್ದಾಗ ಅವರನ್ನು ಠಾಣೆಗೆ ಕರೆಸಿ ಊರಿನ **60- 70** ಜನರು ಠಾಣೆಗೆ ಹೋಗಿ ಸಮಸ್ಯೆಯನ್ನು ನಾವೇ ಬಗೆಹರಿಸಿಕೊಳ್ಳುತ್ತೇವೆಂದು ಹೇಳಿ ವಾಪಸ್ಸು ಬಂದಿದ್ದು ಆದರೆ ಈ ನಿಟ್ಟಿನಲ್ಲಿಯಾವುದೇ ಕ್ರಮ ಕೈಗೊಂಡಿರಲಿಲ್ಲ ಹಾಗೂ ದಿಃ27.8.2017 ರಂದು ಈ ಬಗ್ಗೆ ಮಂಡ್ಯ ಎಸ್ ಪಿ ಕಛೇರಿಯಲ್ಲಿ ದಲಿತ ಮುಖಂಡರ ಸಮಕ್ಷಮ ಮೀಟಿಂಗ್ ಮಾಡಿಸಲು ಅನುವು ಮಾಡಿಕೊಡಬೇಕೆಂದು ತೀರ್ಮಾನ ಮಾಡಿ ಎಸ್ಪಿ ರವರು ತಮ್ಮ ಅಧೀನ ಅಧಿಕಾರಿಗಳಿಗೆ ಕ್ರಮವಹಿಸಲು

ನಿರ್ದೇಶನ ನೀಡಿರುತ್ತಾರೆ " ಎನ್ನುವ ಅಂಶ ನಿಪಿ–1 ದೂರಿನಲ್ಲಿ ಕಂಡುಬರುವುದಿಲ್ಲ. ಊರಿನ ಒಂದಷ್ಟು ಜನ ಘಟನೆ ನಡೆಯುವಾಗ ಪಿರ್ಯಾದಿಯ ಮನೆಯ ಹೊರಗಡೆ ಇದ್ದರು ಎಂದು ನಿಪಿ–1 ದೂರಿನಲ್ಲಿ ನಮೂದಿಸಿರುವುದಿಲ್ಲ.

5. "ಎಲ್ಲಾ ಆರೋಪಿತರು 1ನೇ ಆರೋಪಿಯ ಜೊತೆಗೆ ಗುಂಪು ಕಟಪ್ಪಿಕೊಂಡು ಬಂದು ನಮ್ಮ ಮನೆಯ ಒಳಗೆ ನುಗ್ಗಿ ಮನೆಯನ್ನು ಕಟ್ಟಿಂಗ್ ಶಾಪ್ ಮಾಡುತ್ತೇವೆಂದು ಖುರ್ಚಿ ಕನ್ನಡಿ ಬಟ್ಟೆ ಬಾಚಣಿಗೆ ಕತ್ತರಿ ಇವುಗಳನ್ನು ತಂದು ಅವುಗಳನ್ನು ನಮ್ಮ ಮನೆಯ ಒಳಗೆ ಇಡಲು ಪ್ರಯತ್ನ ಮಾಡಿದರು ಅಷ್ಟರಲ್ಲಿ ನಾನು ನನ್ನ ತಂದೆ ತಾಯಿ ಅವರೆಲ್ಲರನ್ನು ತಡೆದೆವು" ಎನ್ನುವ ಅಂಶ ನಿಪಿ–1 ದೂರಿನಲ್ಲಿ ನಮೂದಿಸಿರುವುದಿಲ್ಲ. "ನಿಮ್ಮ ಮನೆಯನ್ನೇ ಕಟಿಂಗ್ ಶಾಪನ್ನಾಗಿ ಮಾಡುತ್ತೇವೆ ಎಂದು ಆರೋಪಿತರು ಹೇಳಿದರು" ಎನ್ನುವ ಅಂಶವನ್ನು ನಿಪಿ–1 ದೂರಿನಲ್ಲಿ ನಮೂದಿಸಿರುವುದಿಲ್ಲ. " ನೇ ಆರೋಪಿಗೆ ನೋಟೀಸು ಕೊಡದೆ ಏಕೆ ಈ ರೀತಿ ಮಾಡಿದ್ದೀರಿ ಎಂದು ಪೋಲೀಸರು ಕೇಳಿದರು, 1ನೇ ಆರೋಪಿ ಆಗ 2 ರಿಂದ 8ನೇ ಆರೋಪಿತರು ಈ ರೀತಿ ಮಾಡಲು ನನಗೆ ಹೇಳಿದ್ದರಿಂದ ಮಾಡಿರುತ್ತೇನೆ ಎಂದು ಪೋಲೀಸರಿಗೆ ತಿಳಿಸಿದರು, ನಂತರ ಪೋಲೀಸರು ನನ್ನನ್ನು ಊರಿಗೆ 1ನೇ ಆರೋಪಿಯೊಂದಿಗೆ ಕರೆದುಕೊಂಡು ಹೋಗಿ ಕಟಿಂಗ್ ಮಾಡಿಸಿದರು" ಎನ್ನುವ ಅಂಶವನ್ನು ನಿಪಿ–1 ದೂರಿನಲ್ಲಿ ನಮೂದಿಸಿರುವುದಿಲ್ಲ.

**ಮರು ವಿಚಾರಣೆ:** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**